**ದಿನಾಂಕಃ 04.01.2022 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಎ.ಎಂ. ವಕೀಲರಿಂದಃ–**

ನಿಪಿ–1 ನ್ನು ಪೊಲೀಸ್‌ರು ಹೇಳಿದಂತೆ ನನ್ನ ತಮ್ಮ ಬರೆದಿರುತ್ತಾನೆ. ನಿಪಿ–1 ರ ಮೇಲೆ ಪೊಲೀಸ್‌ರು ಸಹಿ ಮಾಡಿ ಎಂದಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ–1 ರಲ್ಲಿ ಏನು ಬರೆದಿರುತ್ತಾರೆ ಎಂದು ಪೂರ್ತಿ ವಿಚಾರಗಳು ನನಗೆ ಗೊತ್ತಿಲ್ಲ. ಆದರೆ ಕಳುವಾದ ಬಗ್ಗೆ ಬರೆದಿರುತ್ತಾರೆ.

2. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಆಭರಣಗಳು ನನ್ನವೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರಿದು ಕಳ್ಳರು ರಸೀದಿಯೊಂದಿಗೆ ಒಡವೆಗಳನ್ನು ಕದ್ದಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ದೂರಿನಲ್ಲಿ ಬರೆಸಿದ ಬಗ್ಗೆ ನನಗೆ ನೆನಪಿಲ್ಲ.

3. ನನಗೆ ಪೊಲೀಸ್‌ರು ಯಾವ ದಿನಾಂಕದಂದು ಆರೋಪಿತನನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು ಎಂದು ಹೇಳಲು ನೆನಪಿಲ್ಲ. ಪೊಲೀಸ್‌ರು ದಿನಾಂಕ.03.08.2019 ರಂದು ಸ್ಥಳ ಪಂಚನಾಮೆಗೆಂದು ಬಂದಿದ್ದರು. ಸ್ಥಳ ಪಂಚನಾಮೆಗೆ ಎಷ್ಟು ಜನ ಸಹಿ ಮಾಡಿರುತ್ತಾರೆಂದು ನೆನಪಿಲ್ಲ. ಸ್ಥಳ ಪಂಚನಾಮೆ ಕಾಲಕ್ಕೆ ಬಹಳ ಜನ ಹಾಜರಿದ್ದರು, ಅವರುಗಳ ಹೆಸರುಗಳು ಹೇಳಲಾಗುವುದಿಲ್ಲ. ಕಚ್ಚಾ ನಕಾಶೆಯನ್ನು ಯಾರು ತಯಾರಿಸಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಮತ್ತು ಕಚ್ಚಾ ನಕಾಶೆಗೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

4. ನನಗೆ ಬ್ಯಾಂಕ್‌ನಲ್ಲಿ ಖಾತೆ ಇದೆ. ನನ್ನ ಸಂಬಳವನ್ನು ಬ್ಯಾಂಕ್ ಖಾತೆಯಲ್ಲಿ ಹಾಕಿರುತ್ತಾರೆ. ಹಣ ಬೇಕಾದಾಗ ಬ್ಯಾಂಕ್‌ನಿಂದ ಬಿಡಿಸಿಕೊಳ್ಳುತ್ತೇನೆ. ಮನೆಯಲ್ಲಿ ಇದ್ದ ರೂ.80,000/– ನಗದು ಹಣ ಯಾವ ಮುಖಬೆಲೆಯ ನೋಟುಗಳು ಎಂದು ಹೇಳಲಾಗುವುದಿಲ್ಲ. ಪೊಲೀಸ್‌ರಿಗೆ ನಾನು ಒಂದು ಬಾರಿ ಹೇಳಿಕೆಯನ್ನು ನೀಡಿರುತ್ತೇನೆ. ಪೊಲೀಸ್‌ರು ನಿಪಿ–2 ರ ಕಾಲಕ್ಕೆ ಬೀಗವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

5. ಆರೋಪಿ ನಮ್ಮ ಮನೆಯಲ್ಲಿ ಕಳ್ಳತನ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಹಣ ಮತ್ತು ಬಂಗಾರದ ಒಡವೆಗಳು ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ. ಪೊಲೀಸ್‌ರು ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರಿದ್ದು ಸ್ಥಳದಲ್ಲಿ ನಿಪಿ–2 ಮತ್ತು 3 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

6. ಆರೋಪಿತನನ್ನು ಪೊಲೀಸ್‌ರು ನಮ್ಮ ಮನೆಗೆ ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನನ್ನು ಈ ಮೊದಲು ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸ್‌ರು ಸ್ಥಳದಿಂದ ಯಾವುದೇ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೂರನ್ನು ನೀಡಿ ಪೊಲೀಸ್‌ರ ಮಾತು ಕೇಳಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.